**ಓಎಸ್. ನಂ.*202/2022***

**ಪಿಡಬ್ಲೂ:*01***

**ಇಂದು ದಿನಾಂಕ:*12.09.2024* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲು : 2 ನೇ ಪ್ರತಿವಾದಿ ಪರ ಶ್ರೀ.ಎಂ.ಜಿ.ಜಿ. ವಕೀಲರಿಂದಃ**

ದಾವಾ ಐಟಂ 2 ರಲ್ಲಿ ನಮೂದಿಸಿರುವ ಸ.ನಂ.278/11 ರ ಜಮೀನನ್ನು ನನಗೆ 18 ವರ್ಷ ಇದ್ದಾಗಲೇ ನನ್ನ ತಂದೆ ಖರೀದಿಸಿದ್ದಾರೆ. ಆ ಆಸ್ತಿಯನ್ನು ಖರೀದಿಸುವ ಮೊದಲು ನನ್ನ ತಂದೆಗೆ ಬೇರೆ ಆಸ್ತಿ ಇರಲಿಲ್ಲ. ಆಗ ನನಗೆ 18 ವರ್ಷ ಆಗಿತ್ತು ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ. ದಾವಾ ಐಟಂ ನಂಬರ್ 1 ರ ಆಸ್ತಿಯನ್ನು ದರಖಾಸ್ತು ಮೂಲಕ 30 ವರ್ಷದ ಹಿಂದೆ ನನ್ನ ತಂದೆಗೆ ಮಂಜೂರಾಗಿದೆ. ಸದರಿ ಆಸ್ತಿಯ ಚೆಕ್ಕುಬಂಧಿ ಗೊತ್ತಿಲ್ಲ. ಆಗ ನಮ್ಮ ಮನೆಯ ವ್ಯವಹಾರ ನಮ್ಮ ತಂದೆ ನೋಡಿಕೊಳ್ಳುತ್ತಿದ್ದೆ ಎಂದರೆ ಸರಿ, ನಾನು ದನಕರು ನೋಡಿಕೊಳ್ಳುತ್ತಿದ್ದೆ. ಸರ್ಕಾರದಿಂದ ಸಾಗುವಳಿ ಚೀಟಿ ಪಡೆದುಕೊಳ್ಳಲು ನನ್ನ ತಂದೆ ಕಿಮ್ಮತ್ತು ಕಟ್ಟಿದ್ದಾರೆ. ನನ್ನ ತಂದೆಗೆ ಮಂಜೂರಾದ ನಂತರ ನಾನು ಬೇರೆಯಾದ ನಂತರ 2 ಎಕರೆ ಜಮೀನು ನನಗೆ ಮಂಜೂರಾಗಿದೆ. ನನ್ನ ತಂದೆಯ ಹೆಸರಿಗೆ ಸಾಗುವಳಿ ಚೀಟಿ ನೀಡಿದ ದಿನವೇ ನನ್ನ ಹೆಸರಿಗೂ ಸಾಗುವಳಿ ಚೀಟಿ ನೀಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹೆಸರಿಗೆ ಮಂಜೂರಾಗಿರುವ ಜಮೀನಿಗೆ ನಾನೇ ಕಿಮ್ಮತ್ತು ಕಟ್ಟಿದ್ದೇನೆ. ನನಗೆ ಮದುವೆಯಾದ ನಂತರ ಬೇರೆಯಾಗಿ ಸಾಗುವಳಿ ಚೀಟಿ ಪಡೆದಿದ್ದೇನೆ. ಅದರ ಚೆಕ್ಕುಬಂಧಿ ಗೊತ್ತಿಲ್ಲ. ನನಗೆ ಮಂಜೂರಾಗಿರುವ ಜಮೀನಿನ ಕಿಮ್ಮತ್ತನ್ನು ನನ್ನ ತಂದೆಯೇ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ನಾವು ಒಟ್ಟಾಗಿ ಇದ್ದಾಗಲೇ ಅವರಿಗೆ ನಮ್ಮ ತಂದೆ ಮದುವೆ ಮಾಡಿದ್ದರು. ಮಾಕೋಡು ಬ್ಯಾಂಕ್ ನಲ್ಲಿ ನಮ್ಮ ತಂದೆ 5,00,000/- ಸಾಲ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಮಾಡಿದ್ದ ರೂ.5,00,000/- ಸಾಲವನ್ನು ಪ್ರತಿವಾದಿ 1 ಮತ್ತು 2 ರವರ ತೀರಿಸಬೇಕೆಂದು ಅವರಿಗೆ ನನ್ನ ತಂದೆ ವಿಲ್ ಮಾಡಿದ್ದಾರೆ ಎಂದರೆ ಸುಳ್ಳು. ನಮ್ಮ ತಂದೆ ತಾಯಿ ಸಾಯುವವರೆಗೆ ಯಾರ ಜೊತೆ ಇದ್ದರು ಎಂದರೆ ಅವರು ಪ್ರತ್ಯೇಕವಾಗಿ ಇದ್ದರು. ಅವರು ವೈದ್ಯಕೀಯ ವೆಚ್ಚವನ್ನು ಯಾರು ಕೊಡುತ್ತಿದ್ದರು ಎಂದರೆ ನಾವು 3 ಜನರು ವರ್ಷಕ್ಕೆ ತಲಾ ರೂ.5,000/- ಹಾಗೂ ಒಬ್ಬೊಬ್ಬರು 5 ಮೂಟೆ ರಾಗಿಯನ್ನು ಕೊಡುತ್ತಿದ್ದೇವು. ನನ್ನ ತಂದೆ ತಾಯಿಯ ಯೋಗಕ್ಷೇಮವನ್ನು 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ನನ್ನ ತಂದೆಯನ್ನು ನೋಡಿಕೊಳ್ಳುತ್ತಿದ್ದ ಕಾರಣ ನನ್ನ ತಂದೆ ತಮ್ಮ ಸ್ವಯಾರ್ಜಿತ ಆಸ್ತಿಯನ್ನು ಅಂದರೆ ದಾವಾ

**ಓಎಸ್. ನಂ.*202/2022***
**ಪಿಡಬ್ಲೂ:*01***

ಐಟಂ ನಂಬರ್ 1 ರಲ್ಲಿ ಪ್ರತಿವಾದಿ 1 ಮತ್ತು 2 ರವರಿಗೆ, ದಾವಾ ಐಟಂ ನಂಬರ್ 2 ರಲ್ಲಿರುವ 23 ಗುಂಟೆ ಜಮೀನು ಮತ್ತು 2 ಬ್ಯಾರನ್ ಲೆಸನ್ಸ್ ಗಳನ್ನು 2 ನೇ ಪ್ರತಿವಾದಿಗೆ ವಿಲ್ ಮಾಡಿದ್ದಾರೆ ಎಂದರೆ ಸುಳ್ಳು. ನಾನು ಮತ್ತು 1 ನೇ ಪ್ರತಿವಾದಿ ಪ್ರತ್ಯೇಕವಾದ ನಂತರ 2 ಮನೆಗಳನ್ನು 2 ನೇ ಪ್ರತಿವಾದಿಯೇ ಕಟ್ಟಿದ್ದಾರೆ ಎಂದರೆ ಸುಳ್ಳು. ದಾವಾ ಐಟಂ ನಂಬರ್ 2 ರಲ್ಲಿರುವ 23 ಗುಂಟೆ ಜಮೀನನ್ನು ನನ್ನ ತಂದೆ ಖರೀದಿಸುವಾಗ ನನಗೆ 9 ವರ್ಷ ವಯಸ್ಸಾಗಿತ್ತು, ಆದ್ದರಿಂದ ಆ ಸಮಯದಲ್ಲಿ ನನಗೆ ಯಾವುದೇ ದುಡಿಮೆಯ ಸಾಮರ್ಥ್ಯ ಇರಲಿಲ್ಲ ನನ್ನ ತಂದೆ ಸಂಪಾದಿಸಿರುವ ಹಣದಿಂದ ಸದರಿ ಆಸ್ತಿಯನ್ನು ಖರೀದಿಸಿರುವುದರಿಂದ ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ರ ಆಸ್ತಿಯು ಹಾಗೂ ನನಗೆ ಮಂಜೂರಾಗಿರುವ 2 ಎಕರೆ ಜಮೀನನ್ನು ನನ್ನ ತಂದೆಯೇ ವ್ಯವಸಾಯ ಮಾಡುತ್ತಿದ್ದರು ಎಂದರೆ ಸುಳ್ಳು. ನನ್ನ ತಂದೆಗೆ ಓದು ಬರಹ ಗೊತ್ತಿರಲಿಲ್ಲ. ನನ್ನ ತಂದೆಗೆ ವ್ಯವಹಾರಿಕ ಜ್ಞಾನ ಚೆನ್ನಾಗಿತ್ತು ಆದ್ದರಿಂದ ಪ್ರತಿವಾದಿ 1 ಮತ್ತು 2 ರವರಿಗೆ ವಿಲ್ ಮಾಡಿರುತ್ತಾರೆ ಎಂದರೆ ಸುಳ್ಳು. ಈ ದಾವೆ ಸಲ್ಲಿಸಲು ದಾಖಲೆಗಳನ್ನು ನಾನೇ ತೆಗೆದುಕೊಂಡಿದ್ದೇನೆ. ಪ್ರಮಾಣ ಪತ್ರವನ್ನು ನಾನೇ ಬರೆಸಿ ಹಾಕಿದ್ದೇನೆ. ಪ್ರಮಾಣ ಪತ್ರದಲ್ಲಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ವಿಲ್ ಆಧಾರದ ಮೇಲೆ 2 ನೇ ಪ್ರತಿವಾದಿ ದಾವಾ ಆಸ್ತಿಯನ್ನು ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದಾರೆ ಅವರಿಗೆ ತೊಂದರೆ ಕೊಡಬೇಕೆಂದು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ನನಗೆ ಮಂಜೂರಾಗಿರುವ 2 ಎಕರೆ ಜಮೀನನ್ನು ಸಹ ನನ್ನ ತಂದೆಯೇ ಗಿಡ ಗಂಟೆಗಳನ್ನು ಕಿತ್ತು ವ್ಯವಸಾಯ ಮಾಡಿ ನನ್ನ ಹೆಸರಿಗೆ ಮಂಜೂರು ಮಾಡಿಸಿಕೊಟ್ಟಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂದು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**
***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**